# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೪ಎ<br>**Part – IVA** | ಬೆಂಗಳೂರು, ಮಂಗಳವಾರ, ೧೦, ಮಾರ್ಚ್, ೨೦೨೬(ಫಾಲ್ಗುಣ, ೧೯, ಶಕವರ್ಷ, ೧೯೪೭)<br>BENGALURU, TUESDAY, 10, MARCH, 2026 (PHALGUNA, 19, SHAKAVARSHA, 1947) | ನಂ. ೨೦೨<br>**No. 202** |
|---|---|---|


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಒಂಭತ್ತನೇ ಅಧಿವೇಶನ**

**(ಮುಂದುವರೆದ ಉಪವೇಶನ)**

## ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2026

**(2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–03)**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಭಾರತ ಸಂವಿಧಾನವು 326ನೇ ಅನುಚ್ಛೇದದಡಿ ಜನರ ಪ್ರಜಾಸತ್ತಾತ್ಮಕ ಇಚ್ಛೆಯನ್ನು ಪ್ರತಿಬಿಂಬಿಸುವ ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕ ರೀತಿಯಲ್ಲಿ ಚುನಾವಣೆ ನಡೆಸುವುದನ್ನು ಖಚಿತಪಡಿಸಿದ್ದು, ವಯಸ್ಕ ಮತಾಧಿಕಾರದ ಮೂಲಕ ಮತದಾನದ ಹಕ್ಕನ್ನು ಖಾತರಿಪಡಿಸಿರುವುದರಿಂದ;

ನ್ಯಾಯಾಂಗವು ಪರಿಗಣಿಸಿರುವಂತೆ ಮತದಾನದ ಗೌಪ್ಯತೆಯ ತತ್ವವು ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಯ ಅಡಿಗಲ್ಲಾಗಿದ್ದು, ಮತದಾನದ ಗೌಪ್ಯತೆಯು ಮತದಾರರನ್ನು ಬಲವಂತ, ಬೆದರಿಕೆ ಮತ್ತು ಅನುಚಿತ ಪ್ರಭಾವದಿಂದ ರಕ್ಷಿಸುವುದನ್ನು ಒತ್ತಿಹೇಳುವುದರ ಮೂಲಕ ಸರ್ವೋಚ್ಚ ನ್ಯಾಯಾಲಯವು ಹಲವಾರು ತೀರ್ಪುಗಳಲ್ಲಿ ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ಪಾವಿತ್ರ್ಯತೆಯನ್ನು ಸುರಕ್ಷಿತಗೊಳಿಸಿರುವುದರಿಂದ;

ಕುಲದೀಪ್ ನಾಯರ್ ವಿರುದ್ಧ ಭಾರತ ಒಕ್ಕೂಟ (2006)ರ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ತೆರೆದ ಮತಪತ್ರಗಳನ್ನು ಅನುಮತಿಸಬಹುದಾದರೂ, ಮತದಾರರ ಸ್ವಾಯತ್ತತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಬಾಹ್ಯ ಒತ್ತಡಗಳನ್ನು ತಡೆಗಟ್ಟಲು ರಹಸ್ಯ ಮತದಾನವು ಅತ್ಯಗತ್ಯವಾಗಿದ್ದು, ಆ ಮೂಲಕ ಮುಕ್ತ ಚುನಾವಣೆಗಳ ಸಾಂವಿಧಾನಿಕ ಆದೇಶವನ್ನು ಎತ್ತಿಹಿಡಿದಿರುವುದರಿಂದ ಎಂದು ಸ್ಪಷ್ಟಪಡಿಸಿರುವುದರಿಂದ;

ಚುನಾವಣಾ ಪ್ರಕ್ರಿಯೆಯಲ್ಲಿ ಮತದಾರರ ನಂಬಿಕೆಯ ಪ್ರಾಮುಖ್ಯತೆಯನ್ನು ನ್ಯಾಯಾಂಗವು ಒತ್ತಿಹೇಳಿದ್ದು, ಮತದಾನದ ಗೌಪ್ಯತೆಯನ್ನು ಕಾಪಾಡುವ ಜೊತೆಗೆ ಪಾರದರ್ಶಕತೆಯನ್ನು ಹೆಚ್ಚಿಸಲು ಮತದಾರರಿಂದ ದೃಢೀಕರಿಸಬಹುದಾದ ಕಾಗದದ ಆಡಿಟ್ ಟ್ರಯಲ್ (VVPAT) ಅನ್ನು

ಪರಿಚಯಿಸಿರುವುದರಿಂದ ಮತ್ತು ಎಲೆಕ್ಟ್ರಾನಿಕ್ ಮತ ವ್ಯವಸ್ಥೆಯ ದೋಷಗಳನ್ನು ಸರಿಪಡಿಸಲು ನಿರಂತರ ಸುಧಾರಣೆಗಳ ಅಗತ್ಯವನ್ನು ಎತ್ತಿ ತೋರಿಸಿರುವುದರಿಂದ;

ವಿದ್ಯುನ್ಮಾನ ಮತಯಂತ್ರಗಳ (EVM) ಕಾರ್ಯನಿರ್ವಹಣೆಯ ಕುರಿತು ಕಳವಳಗಳು ವ್ಯಕ್ತವಾಗಿದ್ದು, ಸಾರ್ವಜನಿಕ ನಂಬಿಕೆಯನ್ನು ಮರು ಸ್ಥಾಪಿಸಲು ಸದೃಢ ರಹಸ್ಯ ಮತದಾನ ಪದ್ಧತಿಗೆ ಮರಳುವುದರ ಅವಶ್ಯಕತೆ ಇರುವುದರಿಂದ;

ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಇವಿಎಂ ವಿಶ್ವಾಸಾರ್ಹತೆ ಮತ್ತು ಮತದಾರರ ಗೌಪ್ಯತೆಯ ಬಗ್ಗೆ ಇರುವ ಕಳವಳಗಳಿಗೆ ಸ್ಪಂದಿಸಿ, ಕಾಗದದ ಮತಪತ್ರಗಳಿಗೆ ಮರಳಲು ಕರ್ನಾಟಕ ರಾಜ್ಯ ಸರ್ಕಾರವು ನಿರ್ಧರಿಸಿರುವುದು, ಗೌಪ್ಯತೆ(anonymity) ಮತ್ತು ಪಾರದರ್ಶಕತೆಗೆ ಆದ್ಯತೆ ನೀಡುವ ಚುನಾವಣಾ ಕಾರ್ಯವ್ಯವಸ್ಥೆಗಳನ್ನು ಬಲಪಡಿಸುವ ಅಗತ್ಯದ ಕುರಿತು ಬೆಳೆಯುತ್ತಿರುವ ಒಮ್ಮತಾಭಿಪ್ರಾಯವನ್ನು ಪ್ರತಿಬಿಂಬಿಸುವುದರಿಂದ;

ಕಾಗದದ ಮತಪತ್ರಗಳು ಅಥವಾ ಇತರ ಗೌಪ್ಯತಾ ಕಾರ್ಯವಿಧಾನಗಳ ಬಳಕೆಯ ಮೂಲಕ ರಹಸ್ಯ ಮತದಾನ ವ್ಯವಸ್ಥೆಯು ಮತದಾರರು ಯಾವುದೇ ಪ್ರತಿಕಾರದ ಭಯವಿಲ್ಲದೆ ತಮ್ಮ ಹಕ್ಕು ಚಲಾಯಿಸುವುದನ್ನು ಖಚಿತಪಡಿಸುವುದರಿಂದ, ಚುನಾವಣಾ ಸಮಗ್ರತೆಯನ್ನು ಉತ್ತೇಜಿಸುವುದರಿಂದ ಮತ್ತು ರಹಸ್ಯ ಮತದಾನದೊಂದಿಗೆ ಮುಕ್ತ ಚುನಾವಣೆಗಳ ಹಕ್ಕನ್ನು ಖಾತರಿಪಡಿಸುವ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ 21ನೇ ಅನುಚ್ಛೇಧದಡಿಯಲ್ಲಿ ಭಾರತದ ಅಂತರರಾಷ್ಟ್ರೀಯ ಬದ್ಧತೆಗಳಿಗೆ ಅನುಗುಣವಾಗಿರುವುದರಿಂದ;

ಸಂವಿಧಾನದಲ್ಲಿ ಪ್ರತಿಪಾದಿಸಲಾದ ಮತ್ತು ನ್ಯಾಯಿಕ ತೀರ್ಪುಗಳ ಮೂಲಕ ಬಲಪಡಿಸಲಾದ ಪ್ರಜಾಸತಾತ್ಮಕ ತತ್ವಗಳನ್ನು ಎತ್ತಿಹಿಡಿಯಲು, ಪಾರದರ್ಶಕ ಪರಿಶೋಧನೆ ಮತ್ತು ಅಕ್ರಮತೆಯ ವಿರುದ್ಧ ಸುರಕ್ಷತಾ ಉಪಬಂಧಗಳೊಂದಿಗೆ, ಎಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ರಹಸ್ಯ ಮತದಾನ ವ್ಯವಸ್ಥೆಯ ಬಳಕೆಯನ್ನು ಕಡ್ಡಾಯಗೊಳಿಸಲು ಶಾಸನವನ್ನು ಅಧಿನಿಯಮಿತಿಗೊಳಿಸುವುದು ಯುಕ್ತವಾಗಿರುವುದರಿಂದ;

ಸ್ಥಳೀಯ ಪ್ರಾಧಿಕಾರಗಳಿಗೆ ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕ ಚುನಾವಣೆಗಳನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ, ಕರ್ನಾಟಕ ರಾಜ್ಯವು ಕಾಗದ ಮತಪತ್ರಗಳನ್ನು ಬಳಸಿಕೊಂಡು ರಹಸ್ಯ ಮತದಾನ ವ್ಯವಸ್ಥೆ ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲು ಸ್ಥಳೀಯ ಸಂಸ್ಥೆಗಳನ್ನು ನಿಯಂತ್ರಿಸುವ ಸಂಬಂಧಿತ ಕಾನೂನುಗಳಿಗೆ ತಿದ್ದುಪಡಿ ಮಾಡಲು ನಿರ್ಧರಿಸಿದ್ದು, ಆ ಮೂಲಕ ರಾಜ್ಯ ಚುನಾವಣಾ ಆಯೋಗವು ಹೆಚ್ಚಿನ ಮತದಾರರ ಗೌಪ್ಯತೆ ಮತ್ತು ಚುನಾವಣಾ ಸಮಗ್ರತೆಯೊಂದಿಗೆ ಚುನಾವಣೆಗಳನ್ನು ನಡೆಸುವುದಕ್ಕೆ ಅನುಕೂಲ ಕಲ್ಪಿಸಬೇಕಾಗಿರುವುದರಿಂದ;

ಹಾಗೂ ಗ್ರಾಮೀಣ ಸ್ಥಳೀಯ ಪ್ರಾಧಿಕಾರಗಳ ಚುನಾವಣೆಗಳಲ್ಲಿ ರಹಸ್ಯ ಮತಪತ್ರ ವ್ಯವಸ್ಥೆಯನ್ನು ಬಳಸಲು, ಆ ಮೂಲಕ ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಸಾರ್ವಜನಿಕ ವಿಶ್ವಾಸವನ್ನು ಬಲಪಡಿಸುವುದಕ್ಕೆ ಉಪಬಂಧ ಕಲ್ಪಿಸಲು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು

ಪಂಚಾಯತ್ ರಾಜ್‌ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ 14)ಕ್ಕೆ ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ 14)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದ (2)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ,-

"(2-ಎ) "ಬ್ಯಾಲೆಟ್ ಅಥವಾ ಮತ ಪೆಟ್ಟಿಗೆ ಅಥವಾ ಮತ ಪತ್ರ" ಎಂದರೆ ಬ್ಯಾಲೆಟ್ ಅಥವಾ ಮತ ಪೆಟ್ಟಿಗೆ ಅಥವಾ ಮತ ಪತ್ರವನ್ನು ಎಲ್ಲೆಲ್ಲಿ ಬಳಸಲಾಗಿದೆಯೋ ಅಲ್ಲಲ್ಲಿ ರಹಸ್ಯ ಮತ ಪತ್ರ ಎಂಬುದಾಗಿ ಅನ್ವಯಿಸಿ ಅರ್ಥೈಸತಕ್ಕದ್ದು;"

**3. ಪ್ರಕರಣ 7ರ ತಿದ್ದುಪಡಿ.-** ಮೂಲ ಅಧಿನಿಯಮದ, 7ನೇ ಪ್ರಕರಣದ (3)ನೇ ಉಪಪ್ರಕರಣ ಮತ್ತು ವಿವರಣೆಯನ್ನು ಬಿಟ್ಟುಬಿಡತಕ್ಕದ್ದು.

**4. ಪ್ರಕರಣ 31ಎ ತಿದ್ದುಪಡಿ.-** ಮೂಲ ಅಧಿನಿಯಮದ, 31ಎ ಪ್ರಕರಣದ (ಎ) ಖಂಡ ಮತ್ತು (ಡಿ) ಖಂಡದಲ್ಲಿರುವ "ಅಥವಾ ಮತದಾನ ಯಂತ್ರಗಳನ್ನು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**5. ಪ್ರಕರಣ 130ರ ತಿದ್ದುಪಡಿ.-** ಮೂಲ ಅಧಿನಿಯಮದ, 130ನೇ ಪ್ರಕರಣದಲ್ಲಿನ (2-ಎ) ಉಪಪ್ರಕರಣ ಮತ್ತು ವಿವರಣೆಯನ್ನು ಬಿಟ್ಟುಬಿಡತಕ್ಕದ್ದು.

**6. ಪ್ರಕರಣ 165ರ ಪ್ರತಿಯೋಜನೆ.-** ಮೂಲ ಅಧಿನಿಯಮದ, 165ನೇ ಪ್ರಕರಣಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**165. ಮತದಾರರ ಪಟ್ಟಿ.-** (1) ಜಿಲ್ಲಾ ಪಂಚಾಯತಿಯ ಪ್ರತಿಯೊಂದು ಮತಕ್ಷೇತ್ರದಲ್ಲಿ, ರಾಜ್ಯ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಉಪವಿಭಾಗಾಧಿಕಾರಿಯು ಮತದಾರರ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು:

(2) ಹಾಗೆ ಸಿದ್ಧಪಡಿಸಲಾದ ಮತದಾರರ ಪಟ್ಟಿಯನ್ನು, ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಪರಿಷ್ಕರಿಸತಕ್ಕದ್ದು, ಮಾರ್ಪಡಿಸತಕ್ಕದ್ದು, ಇಂದೀಕರಿಸತಕ್ಕದ್ದು ಹಾಗೂ ಪ್ರಕಟಿಸತಕ್ಕದ್ದು.

(3) ಜಿಲ್ಲಾ ಪಂಚಾಯತಿಯ ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸಲಾಗಿರುವ ಯಾರೇ ವ್ಯಕ್ತಿಯು, ಆ ಮತಕ್ಷೇತ್ರದ ಚುನಾವಣೆಯಲ್ಲಿ ಮತದಾನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಅಂಥ ಜಿಲ್ಲಾ ಪಂಚಾಯಿತಿಯ ಮತಕ್ಷೇತ್ರದ ಮತದಾರರ ಪಟ್ಟಿಯು, ಅಂಥ ಚುನಾವಣೆಗಾಗಿ ನಾಮಪತ್ರ ಸಲ್ಲಿಸುವುದಕ್ಕೆ ಇರುವ ಕೊನೆಯ ದಿನದ ತರುವಾಯ ಮತ್ತು ಅಂಥ ಚುನಾವಣೆಯು ಮುಕ್ತಾಯಗೊಳ್ಳುವುದಕ್ಕೆ ಮೊದಲು, ಮಾಡಿದ್ದ ಯಾವುದೇ ನಮೂದಿನ ತಿದ್ದುಪಡಿಯನ್ನು, ಬದಲಾವಣೆಯನ್ನು, ಸೇರ್ಪಡೆಯನ್ನು ಅಥವಾ ರದ್ದತಿಯನ್ನು ಒಳಗೊಳ್ಳತಕ್ಕದ್ದಲ್ಲ."

**7. ಪ್ರಕರಣ 169ರ ತಿದ್ದುಪಡಿ.-** ಮೂಲ ಅಧಿನಿಯಮದ, 169ನೇ ಪ್ರಕರಣದಲ್ಲಿನ (2-ಎ) ಉಪ-ಪ್ರಕರಣ ಮತ್ತು ಅದರ ವಿವರಣೆಯನ್ನು ಬಿಟ್ಟುಬಿಡತಕ್ಕದ್ದು.

**8. ತೊಂದರೆಗಳ ನಿವಾರಣೆ.-** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ, ಯಾವುದೇ ತೊಂದರೆ ಉದ್ಭವಿಸಿದರೆ, ಸಂದರ್ಭವು ಅಗತ್ಯಪಡಿಸಬಹುದಾದಂತೆ, ತೊಂದರೆಯನ್ನು ನಿವಾರಿಸಲು ಅವಶ್ಯಕವೆಂದು ಕಂಡುಬರುವ ಯಾವುದನ್ನಾದರೂ, ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ಮಾಡಬಹುದು.

(2) ಈ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೇ ರಾಜ್ಯ ವಿಧಾನ ಮಂಡಲದ ಸದನದ ಮುಂದೆ ಮಂಡಿಸತಕ್ಕದ್ದು.

**9. ಪದಾವಳಿಗಳ ಅರ್ಥೈಸುವಿಕೆ.-** ರಾಜ್ಯ ಚುನಾವಣಾ ಆಯೋಗದ ಮೂಲಕ ನಡೆಸಲಾಗುವ ಸಂಬಂಧಪಟ್ಟ ಗ್ರಾಮೀಣ ಸ್ಥಳೀಯ ಪ್ರಾಧಿಕಾರಗಳಿಗೆ ಚುನಾವಣೆಗಳನ್ನು ನಿಯಂತ್ರಿಸುವ ಮೂಲ ಅಧಿನಿಯಮ ಮತ್ತು ಅದರಡಿ ರಚಿಸಿದ ನಿಯಮಗಳಲ್ಲಿ "ಬ್ಯಾಲೆಟ್" ಅಥವಾ "ಮತ ಪೆಟ್ಟಿಗೆ" ಅಥವಾ "ಮತ ಪತ್ರ"ದ ಯಾವುದೇ ಉಲ್ಲೇಖಕ್ಕೆ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣಾ ತತ್ವಗಳನುಸಾರ ರಹಸ್ಯ ಮತದಾನವನ್ನು ಖಚಿತಪಡಿಸಿಕೊಳ್ಳಲು "ಬ್ಯಾಲೆಟ್" ಅಥವಾ "ಮತ ಪೆಟ್ಟಿಗೆ" ಅಥವಾ "ರಹಸ್ಯ ಮತಪತ್ರ" ಎಂಬುದಾಗಿ ಅರ್ಥೈಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ,1993(1993ರ ಕರ್ನಾಟಕ ಅಧಿನಿಯಮ 14)ನ್ನು ಈ ಮುಂದಿನವುಗಳಿಗಾಗಿ,-

(i) ಭಾರತ ಸಂವಿಧಾನದ 326ನೇ ಅನುಚ್ಛೇಧದಡಿ ಜನರ ಪ್ರಜಾಸತ್ತಾತ್ಮಕ ಇಚ್ಛೆಯನ್ನು ಪ್ರತಿಬಿಂಬಿಸುವ ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕ ರೀತಿಯಲ್ಲಿ ಚುನಾವಣೆ ನಡೆಸುವುದನ್ನು ಖಚಿತಪಡಿಸಿಕೊಳ್ಳಲು;

(ii) ಮತದಾರರ ಮತಪತ್ರದ ಗೌಪ್ಯತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಮತದಾರರನ್ನು ದಬ್ಬಾಳಿಕೆ, ಬೆದರಿಕೆ ಮತ್ತು ಅನಗತ್ಯ ಪ್ರಭಾವದಿಂದ ರಕ್ಷಿಸಿ, ಆ ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಯ ಪಾವಿತ್ರ್ಯವನ್ನು ಸುರಕ್ಷಿತಗೊಳಿಸಲು;

(iii) ಕುಲದೀಪ್ ನಾಯರ್ ವಿರುದ್ಧ ಒಕ್ಕೂಟ ಸರ್ಕಾರ (2006)ರ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಲಾದ ತೀರ್ಪನ್ನು ಅನುಷ್ಠಾನಗೊಳಿಸಲು; ಮತ್ತು

(iv) ಗೌಪ್ಯತೆ(anonymity) ಮತ್ತು ಪಾರದರ್ಶಕತೆಗೆ ಆದ್ಯತೆ ನೀಡುವ ಚುನಾವಣಾ ಕಾರ್ಯವ್ಯವಸ್ಥೆಗಳನ್ನು ಬಲಪಡಿಸಲು;

- ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಪ್ರಿಯಾಂಕ ಖರ್ಗೆ**
ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ
ತಂತ್ರಜ್ಞಾನ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ
## ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ
## (1993ರ ಕರ್ನಾಟಕ ಅಧಿನಿಯಮ 14) ಉದ್ಧೃತ ಭಾಗ

**XXX XXX XXX**

**2. ಅರ್ಥ ವಿವರಣೆಗಳು.- XXX XXX**

(2)"ಹಿಂದುಳಿದ ವರ್ಗಗಳು" ಎಂದರೆ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳ ಸ್ಥಾನಗಳಲ್ಲಿ ಮತ್ತು ಅಧ್ಯಕ್ಷರ ಹುದ್ದೆಗಳಲ್ಲಿ ಮೀಸಲಾತಿಯ ಉದ್ದೇಶಕ್ಕಾಗಿ ಕಾಲಕಾಲಕ್ಕೆ ಸರ್ಕಾರದಿಂದ ``ಎ'' ಮತ್ತು ``ಬಿ'' ಪ್ರವರ್ಗಗಳೆಂಬುದಾಗಿ ವರ್ಗೀಕರಿಸಬಹುದಾದ ಮತ್ತು ಅಧಿಸೂಚಿಸಬಹುದಾದ ಅಂಥ ವರ್ಗ ಅಥವಾ ವರ್ಗಗಳ ನಾಗರಿಕರು;

(3) "ಕಟ್ಟಡ" ಎಂಬುದರಲ್ಲಿ ಮನೆ, ಹೊರ-ಮನೆ, ಅಂಗಡಿ, ಕೊಟ್ಟಿಗೆ, ಉಗ್ರಾಣ, ಕಾರ್ಯಾಗಾರ, ಮೇಲ್ಛಪ್ಪರ, ಷೆಡ್, ಗುಡಿಸಲು ಅಥವಾ ಮಾನವ ವಾಸಕ್ಕಾಗಿ ಅಥವಾ ಬೇರೆ ರೀತಿಯಾಗಿ ಉಪಯೋಗಿಸುವ ಇತರ ಆವರಣಗಳು ಒಳಗೊಳ್ಳುತ್ತವೆ ಮತ್ತು ಗೋಡೆ, ಆವರಣ ಗೋಡೆ, ಬೇಲಿ, ವರಾಂಡ, ಜಗಲಿ, ಮೇಲುಪಾಯ, ಬಾಗಿಲಮೆಟ್ಟಿಲು ಮತ್ತು ಅಂಥವು ಒಳಗೊಳ್ಳತಕ್ಕದ್ದು

**XXX XXX XXX**

**7.ಮತದಾನದ ವಿಧಾನ ಮತ್ತು ಚುನಾವಣಾ ಕಾರ್ಯವಿಧಾನ.-** (1) ಪ್ರತಿಯೊಬ್ಬ ಮತದಾರನು, ಚುನಾವಣಾ ಕ್ಷೇತ್ರದಿಂದ ಎಷ್ಟು ಸದಸ್ಯರು ಚುನಾಯಿತರಾಗಬೇಕಾಗಿದೆಯೋ ಅಷ್ಟು ಮತಗಳನ್ನು ಹೊಂದಿರತಕ್ಕದ್ದು. ಯಾವನೇ ಮತದಾರನು, ಒಬ್ಬ ಅಭ್ಯರ್ಥಿಗೆ ಒಂದಕ್ಕಿಂತ ಹೆಚ್ಚು ಮತವನ್ನು ಕೊಡತಕ್ಕದ್ದಲ್ಲ.

(2) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಗ್ರಾಮ ಪಂಚಾಯತಿಗೆ ಚುನಾವಣೆಗಳನ್ನು, ಪಕ್ಷದ ಆಧಾರ ರಹಿತವಾಗಿ, ಗೊತ್ತುಪಡಿಸಬಹುದಾದಂಥ ನಿಯಮಗಳಿಗೆ ಅನುಸಾರವಾಗಿ ಮತದಾನದ ಮೂಲಕ ನಡೆಸತಕ್ಕದ್ದು.

(3) ಈ ಅಧಿನಿಯಮದಲ್ಲಿ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಏನೇ ಇದ್ದರೂ, ನಿಯಮಿಸಬಹುದಾದಂಥ ವಿಧಾನದಲ್ಲಿ, ಮತದಾನ ಯಂತ್ರಗಳ ಮೂಲಕ, ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಮತಗಳನ್ನು ನೀಡುವುದನ್ನು ಮತ್ತು ದಾಖಲಿಸುವುದನ್ನು, ಪ್ರತಿಯೊಂದು ಪ್ರಕರಣದ ಪರಿಸ್ಥಿತಿಗನುಸಾರವಾಗಿ ರಾಜ್ಯ ಚುನಾವಣಾ ಆಯೋಗವು ನಿರ್ದಿಷ್ಟ ಪಡಿಸಬಹುದಾದಂತೆ ಅಂಥ ಚುನಾವಣಾ ಕ್ಷೇತ್ರದಲ್ಲಿ ಅಥವಾ ಚುನಾವಣಾ ಕ್ಷೇತ್ರಗಳಲ್ಲಿ ಅಂಗೀಕರಿಸಬಹುದು.

**ವಿವರಣೆ:** ಈ ಪ್ರಕರಣದ ಉದ್ದೇಶಕ್ಕಾಗಿ, ``ಮತದಾನ ಯಂತ್ರ'' ಎಂದರೆ, ಮತಗಳನ್ನು ನೀಡುವುದಕ್ಕೆ ಅಥವಾ ದಾಖಲಿಸುವುದಕ್ಕೆ ಬಳಸಲಾಗುವ, ವಿದ್ಯುನ್ಮಾನ ವಿಧಾನದ ಮೂಲಕವಾಗಲಿ ಅಥವಾ ಅನ್ಯಥಾ ಕಾರ್ಯ ನಿರ್ವಹಿಸುವ, ಯಾವುದೇ ಯಂತ್ರ ಅಥವಾ ಸಲಕರಣೆ ಮತ್ತು ಈ ಅಧಿನಿಯಮದಲ್ಲಿ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಮತಪೆಟ್ಟಿಗೆ ಅಥವಾ ಮತಪತ್ರಕ್ಕೆ ಸಂಬಂಧಿಸಿದ ಯಾವುದೇ

ಉಲ್ಲೇಖವು, ಅನ್ಯಥಾ ಉಪಬಂಧಿಸಿದುದನ್ನುಳಿದು, ಯಾವುದೇ ಚುನಾವಣೆಯಲ್ಲಿ ಅಂಥ ಮತಯಂತ್ರಗಳನ್ನು ಬಳಸಿರುವಲ್ಲೆಲ್ಲಾ ಅಂಥ ಮತಯಂತ್ರಕ್ಕೆ ಸಂಬಂಧಿಸಿದ ಉಲ್ಲೇಖವನ್ನು ಒಳಗೊಳ್ಳುತ್ತದೆಂಬುದಾಗಿ ಅರ್ಥೈಸಲಾಗುವುದು.

**XXX XXX XXX**

**31ಎ. ಮತಗಟ್ಟೆಯನ್ನು ವಶಪಡಿಸಿಕೊಂಡ ಅಪರಾಧ.-** ಮತಗಟ್ಟೆಯನ್ನು ವಶಪಡಿಸಿಕೊಳ್ಳುವ ಅಪರಾಧವನ್ನು ಮಾಡುವ ಯಾವೊಬ್ಬ ವ್ಯಕ್ತಿಯು, ಆರು ತಿಂಗಳುಗಳಿಗೆ ಕಡಿಮೆಯಿಲ್ಲದ ಆದರೆ ಎರಡು ವರ್ಷಗಳವರೆಗಿರಬಹುದಾದ ಕಾರಾವಾಸ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಅಂಥ ಅಪರಾಧವನ್ನು ಸರ್ಕಾರದ ಸೇವೆಯಲ್ಲಿರುವ ವ್ಯಕ್ತಿಯು ಮಾಡಿರುವಲ್ಲಿ, ಆತನು ಒಂದು ವರ್ಷಕ್ಕೆ ಕಡಿಮೆಯಿಲ್ಲದ ಆದರೆ ಮೂರು ವರ್ಷಗಳವರೆಗಿರಬಹುದಾದ ಕಾರಾವಾಸ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**ವಿವರಣೆ.-** ಈ ಪ್ರಕರಣದ ಉದ್ದೇಶಕ್ಕಾಗಿ ``ಮತಗಟ್ಟೆಯನ್ನು ವಶಪಡಿಸಿಕೊಳ್ಳುವುದು'' ಎಂಬುದರಲ್ಲಿ ಇತರ ವಿಷಯಗಳ ಜೊತೆಗೆ ಈ ಮುಂದಿನ ಎಲ್ಲ ಅಥವಾ ಯಾವುವೇ ಕಾರ್ಯ ಚಟುವಟಿಕೆಗಳು ಸೇರುತ್ತವೆ, ಎಂದರೆ:-

(ಎ) ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳು ಮತದಾನ ಕೇಂದ್ರವನ್ನು ಅಥವಾ ಮತದಾನಕ್ಕಾಗಿ ನಿಗದಿಪಡಿಸಲಾದ ಸ್ಥಳವನ್ನು ವಶಕ್ಕೆ ತೆಗೆದುಕೊಂಡು, ಮತದಾನ ಕೇಂದ್ರದ ಅಧಿಕಾರಿಗಳು ಮತ ಪತ್ರಗಳನ್ನು ಅಥವಾ ಮತದಾನ ಯಂತ್ರಗಳನ್ನು ಒಪ್ಪಿಸುವಂತೆ ಮಾಡುವುದು ಮತ್ತು ಕ್ರಮಬದ್ಧವಾಗಿ ನಡೆಯುತ್ತಿರುವ ಚುನಾವಣೆಗಳ ಮೇಲೆ ಪರಿಣಾಮ ಬೀರುವಂಥ ಇತರ ಯಾವುದೇ ಕೃತ್ಯವನ್ನು ಮಾಡುವುದು;

(ಬಿ) ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳು ಮತದಾನ ಕೇಂದ್ರವನ್ನು ಅಥವಾ ಮತದಾನಕ್ಕಾಗಿ ನಿಗದಿಪಡಿಸಲಾದ ಸ್ಥಳವನ್ನು ಸ್ವಾಧೀನಕ್ಕೆ ತೆಗೆದುಕೊಂಡು ತನ್ನ ಅಥವಾ ತಮ್ಮ ಬೆಂಬಲಿಗರಿಗೆ ಮಾತ್ರ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಅನುಮತಿಸಿ, ಇತರರು ಮತ ನೀಡದಂತೆ ಅಡ್ಡಿಪಡಿಸುವುದು;

(ಸಿ) ಯಾವೊಬ್ಬ ಮತದಾರನನ್ನು ಬೆದರಿಸಿ ಆತನು ಮತದಾನ ಕೇಂದ್ರಕ್ಕೆ ಅಥವಾ ಮತದಾನಕ್ಕಾಗಿ ನಿಗದಿಪಡಿಸಲಾದ ಸ್ಥಳಕ್ಕೆ ಹೋಗಿ ತನ್ನ ಮತ ನೀಡದಂತೆ ಅಡ್ಡಿಪಡಿಸುವುದು;

(ಡಿ) ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳು ಮತಗಳ ಎಣಿಕೆ ನಡೆಯುತ್ತಿರುವ ಸ್ಥಳವನ್ನು ವಶಕ್ಕೆ ತೆಗೆದುಕೊಂಡು, ಮತಗಳ ಎಣಿಕೆ ಮಾಡುತ್ತಿರುವ ಅಧಿಕಾರಿಗಳು ಮತಪತ್ರಗಳನ್ನು ಅಥವಾ ಮತದಾನ ಯಂತ್ರಗಳನ್ನು ಒಪ್ಪಿಸುವಂತೆ ಮಾಡುವುದು ಮತ್ತು ಕ್ರಮಬದ್ಧವಾಗಿ ನಡೆಯುತ್ತಿರುವ ಮತಗಳ ಎಣಿಕೆಯ ಮೇಲೆ ಪರಿಣಾಮ ಬೀರುವಂಥ ಯಾವುದಾದರೂ ಕೃತ್ಯವನ್ನು ಮಾಡುವುದು;

(ಇ) ಸರ್ಕಾರದ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯು ಸದರಿ ಕಾರ್ಯ ಚಟುವಟಿಕೆಗಳಲ್ಲಿ ಎಲ್ಲ ಅಥವಾ ಯಾವುದೇ ಕಾರ್ಯ ಚಟುವಟಿಕೆಯನ್ನು ಮಾಡುವುದು ಅಥವಾ ಅಭ್ಯರ್ಥಿಯು ಚುನಾಯಿತನಾಗುವ ಸಾಧ್ಯತೆಯನ್ನು ಹೆಚ್ಚಿಸುವಂಥ ಯಾವುವೇ ಕಾರ್ಯ ಚಟುವಟಿಕೆಗಳಿಗೆ ನೆರವು ನೀಡುವುದು ಅಥವಾ ಪರೋಕ್ಷ ಸಮ್ಮತಿ ನೀಡುವುದು.

**XXX** **XXX** **XXX**

**130. ಮತ ನೀಡುವ ವಿಧಾನ ಮತ್ತು ಚುನಾವಣೆಗಾಗಿ ಪ್ರಕ್ರಿಯೆ.-** (1) ಪ್ರತಿಯೊಬ್ಬ ಮತದಾರನು, ಎಷ್ಟು ಸದಸ್ಯರು ಚುನಾಯಿತರಾಗಬೇಕಾಗಿದೆಯೋ ಅಷ್ಟು ಮತಗಳನ್ನು ಹೊಂದಿರತಕ್ಕದ್ದು. ಯಾವನೇ ಮತದಾರನು, ಯಾವನೇ ಅಭ್ಯರ್ಥಿಗೆ ಒಂದಕ್ಕಿಂತ ಹೆಚ್ಚು ಮತಗಳನ್ನು ಕೊಡತಕ್ಕದ್ದಲ್ಲ.

(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ತಾಲ್ಲೂಕು ಪಂಚಾಯತಿಗೆ ಚುನಾವಣೆಗಳನ್ನು ಗೊತ್ತುಪಡಿಸಬಹುದಾದಂಥ ನಿಯಮಗಳಿಗನುಸಾರವಾಗಿ ಮತದಾನದ ಮೂಲಕ ನಡೆಸತಕ್ಕದ್ದು.

(2ಎ) ಈ ಅಧಿನಿಯಮದಲ್ಲಿ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಏನೇ ಇದ್ದರೂ, ನಿಯಮಿಸಬಹುದಾದಂಥ ವಿಧಾನದಲ್ಲಿ, ಮತದಾನ ಯಂತ್ರಗಳ ಮೂಲಕ, ತಾಲ್ಲೂಕು ಪಂಚಾಯತಿ ಚುನಾವಣೆಯಲ್ಲಿ ಮತಗಳನ್ನು ನೀಡುವುದನ್ನು ಮತ್ತು ದಾಖಲಿಸುವುದನ್ನು, ಪ್ರತಿಯೊಂದು ಪ್ರಕರಣದ ಪರಿಸ್ಥಿತಿಗನುಸಾರವಾಗಿ ರಾಜ್ಯ ಚುನಾವಣಾ ಆಯೋಗವು ನಿರ್ದಿಷ್ಟ ಪಡಿಸಬಹುದಾದಂತೆ ಅಂಥ ಚುನಾವಣಾ ಕ್ಷೇತ್ರದಲ್ಲಿ ಅಥವಾ ಚುನಾವಣಾ ಕ್ಷೇತ್ರಗಳಲ್ಲಿ ಅಂಗೀಕರಿಸಬಹುದು. ವಿವರಣೆ: ಈ ಪ್ರಕರಣದ ಉದ್ದೇಶಕ್ಕಾಗಿ, ``ಮತದಾನ ಯಂತ್ರ'' ಎಂದರೆ, ಮತಗಳನ್ನು ನೀಡುವುದಕ್ಕೆ ಅಥವಾ ದಾಖಲಿಸುವುದಕ್ಕೆ ಬಳಸಲಾಗುವ, ವಿದ್ಯುನ್ಮಾನ ವಿಧಾನದ ಮೂಲಕವಾಗಲಿ ಅಥವಾ ಅನ್ಯಥಾ, ಕಾರ್ಯ ನಿರ್ವಹಿಸುವ, ಯಾವುದೇ ಯಂತ್ರ ಅಥವಾ ಸಲಕರಣೆ ಮತ್ತು ಈ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಮತಪೆಟ್ಟಿಗೆ ಅಥವಾ ಮತಪತ್ರಕ್ಕೆ ಸಂಬಂಧಿಸಿದ ಯಾವುದೇ ಉಲ್ಲೇಖವು, ಅನ್ಯಥಾ ಉಪಬಂಧಿಸಿದುದನ್ನುಳಿದು, ಯಾವುದೇ ಚುನಾವಣೆಯಲ್ಲಿ ಅಂಥ ಮತಯಂತ್ರಗಳನ್ನು ಬಳಸಿರುವಲ್ಲೆಲ್ಲಾ ಅಂಥ ಮತಯಂತ್ರಕ್ಕೆ ಸಂಬಂಧಿಸಿದ ಉಲ್ಲೇಖವನ್ನು ಒಳಗೊಳ್ಳುತ್ತದೆಂಬುದಾಗಿ ಅರ್ಥೈಸಲಾಗುವುದು.

(3) 26, 27, 28, 29, 30, 31, 31ಎ, 31ಬಿ,1 32, 33, 34, 35, 36, 37, 38 ,39, ಮತ್ತು 40ನೇ ಪ್ರಕರಣಗಳ ಉಪಬಂಧಗಳು, ಗ್ರಾಮ ಪಂಚಾಯತಿಗಳ ಚುನಾವಣೆಗಳಿಗೆ ಅನ್ವಯವಾಗುವಂತೆಯೇ ತಾಲ್ಲೂಕು ಪಂಚಾಯತಿ ಚುನಾವಣೆಗಳಿಗೆ ಸಬಂಧಿಸಿದಂತೆಯೂ ಅನ್ವಯವಾಗತಕ್ಕದ್ದು.

**XXX XXX XXX**

**165. ಮತದಾರರ ಪಟ್ಟಿ.-** ಜಿಲ್ಲಾ ಪಂಚಾಯತಿಯ ಮತದಾರರ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೊಳಪಟ್ಟು ಅಸಿಸ್ಟೆಂಟ್ ಕಮೀಷನರನು ಸಿದ್ಧಪಡಿಸತಕ್ಕದ್ದು:

ಪರಂತು, ಜಿಲ್ಲಾ ಪಂಚಾಯತಿಯ ಯಾವುದೇ ಚುನಾವಣಾ ಕ್ಷೇತ್ರದಲ್ಲಿ ಸೇರಿಸಿರುವಂಥ ಜಿಲ್ಲೆಯ ಅಂಥ ಭಾಗಕ್ಕಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕರ್ನಾಟಕ ವಿಧಾನಸಭೆಯ ಮತದಾರರ ಪಟ್ಟಿಯನ್ನು ಅಂಥ ಚುನಾವಣಾ ಕ್ಷೇತ್ರಕ್ಕಾಗಿ ಜಿಲ್ಲಾ ಪಂಚಾಯತಿಯ ಮತದಾರರ ಪಟ್ಟಿಯ ಸಿದ್ಧತೆಯ ಉದ್ದೇಶಕ್ಕಾಗಿ ಅಳವಡಿಸಿಕೊಳ್ಳಬಹುದು:

ಅಷ್ಟೇ ಅಲ್ಲದೆ, ಜಿಲ್ಲಾ ಪಂಚಾಯತಿಯ ಅಂಥ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯು, ಅಂಥ ಚುನಾವಣಾ ಕ್ಷೇತ್ರಕ್ಕೆ ಚುನಾವಣೆಗಾಗಿ ನಾಮಪತ್ರ ಸಲ್ಲಿಸುವುದಕ್ಕಾಗಿ ಇರುವ ಕೊನೆಯ ದಿನಾಂಕದ ತರುವಾಯ ಮತ್ತು ಅಂಥ ಚುನಾವಣೆಯು ಮುಕ್ತಾಯವಾಗುವುದಕ್ಕೆ ಮುಂಚೆ ಮಾಡಿದ ಯಾವುದೇ ನಮೂದಿನ ಯಾವುದೇ ತಿದ್ದುಪಡಿ, ಸ್ಥಾನಪಲ್ಲಟ, ಸೇರ್ಪಡೆ ಅಥವಾ ಬಿಟ್ಟು ಬಿಟ್ಟಿರುವುದನ್ನು ಒಳಗೊಂಡಿರತಕ್ಕದ್ದಲ್ಲ.

**XXX XXX XXX**

**169. ಮತ ನೀಡುವ ವಿಧಾನ ಮತ್ತು ಚುನಾವಣಾ ಕಾರ್ಯ ವಿಧಾನ.-** (1) ಪ್ರತಿಯೊಬ್ಬ ಮತದಾರನು, ಎಷ್ಟು ಸದಸ್ಯರು ಚುನಾಯಿತರಾಗಬೇಕಾಗಿದೆಯೋ ಅಷ್ಟು ಮತಗಳನ್ನು ಹೊಂದಿರತಕ್ಕದ್ದು. ಯಾವನೇ ಮತದಾರನು ಯಾವನೇ ಅಭ್ಯರ್ಥಿಗೆ ಒಂದಕ್ಕಿಂತ ಹೆಚ್ಚು ಮತಗಳನ್ನು ಕೊಡತಕ್ಕದ್ದಲ್ಲ.

(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಜಿಲ್ಲಾ ಪಂಚಾಯತಿಗೆ ಚುನಾವಣೆಗಳನ್ನು ಗೊತ್ತುಪಡಿಸಬಹುದಾದಂಥ ನಿಯಮಗಳಿಗನುಸಾರವಾಗಿ ಮತದಾನದ ಮೂಲಕ ನಡೆಸತಕ್ಕದ್ದು.

(2ಎ) ಈ ಅಧಿನಿಯಮದಲ್ಲಿ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಏನೇ ಇದ್ದರೂ, ನಿಯಮಿಸಬಹುದಾದಂಥ ವಿಧಾನದಲ್ಲಿ, ಮತದಾನ ಯಂತ್ರಗಳ ಮೂಲಕ, ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಮತಗಳನ್ನು ನೀಡುವುದನ್ನು ಮತ್ತು ದಾಖಲಿಸುವುದನ್ನು, ಪ್ರತಿಯೊಂದು ಪ್ರಕರಣದ ಪರಿಸ್ಥಿತಿಗನುಸಾರವಾಗಿ ರಾಜ್ಯ ಚುನಾವಣಾ ಆಯೋಗವು ನಿರ್ದಿಷ್ಟಪಡಿಸಬಹುದಾದಂತೆ ಅಂಥ ಚುನಾವಣಾ ಕ್ಷೇತ್ರದಲ್ಲಿ ಅಥವಾ ಚುನಾವಣಾ ಕ್ಷೇತ್ರಗಳಲ್ಲಿ ಅಂಗೀಕರಿಸಬಹುದು.

**ವಿವರಣೆ:** ಈ ಪ್ರಕರಣದ ಉದ್ದೇಶಕ್ಕಾಗಿ, ``ಮತದಾನ ಯಂತ್ರ'' ಎಂದರೆ, ಮತಗಳನ್ನು ನೀಡುವುದಕ್ಕೆ ಅಥವಾ ದಾಖಲಿಸುವುದಕ್ಕೆ ಬಳಸಲಾಗುವ, ವಿದ್ಯುನ್ಮಾನ ವಿಧಾನದ ಮೂಲಕವಾಗಲಿ ಅಥವಾ ಅನ್ಯಥಾ, ಕಾರ್ಯ ನಿರ್ವಹಿಸುವ, ಯಾವುದೇ ಯಂತ್ರ ಅಥವಾ ಸಲಕರಣೆ ಮತ್ತು ಈ ಅಧಿನಿಯಮದಲ್ಲಿ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಮತಪೆಟ್ಟಿಗೆ ಅಥವಾ ಮತಪತ್ರಕ್ಕೆ ಸಂಬಂಧಿಸಿದ ಯಾವುದೇ ಉಲ್ಲೇಖವು, ಅನ್ಯಥಾ ಉಪಬಂಧಿಸಿದುದನ್ನುಳಿದು, ಯಾವುದೇ ಚುನಾವಣೆಯಲ್ಲಿ ಅಂಥ ಮತಯಂತ್ರಗಳನ್ನು ಬಳಸಿರುವಲ್ಲೆಲ್ಲಾ ಅಂಥ ಮತಯಂತ್ರಕ್ಕೆ ಸಂಬಂಧಿಸಿದ ಉಲ್ಲೇಖವನ್ನು ಒಳಗೊಳ್ಳುತ್ತದೆಂಬುದಾಗಿ ಅರ್ಥೈಸಲಾಗುವುದು.

(3) 26, 27, 28, 29, 30, 31, 31ಎ, 31ಬಿ, 32, 33, 34, 35, 36, 37, 38, 39, ಮತ್ತು 40ನೇ ಪ್ರಕರಣಗಳ ಉಪಬಂಧಗಳು ಗ್ರಾಮ ಪಂಚಾಯತಿಗಳ ಚುನಾವಣೆಗಳಿಗೆ ಅನ್ವಯವಾಗುವಂತೆಯೇ ಜಿಲ್ಲಾ ಪಂಚಾಯತಿಯ ಚುನಾವಣೆಗಳಿಗೆ ಸಂಬಂಧಿಸಿದಂತೆಯೂ ಅನ್ವಯವಾಗತಕ್ಕದ್ದು.

**XXX XXX XXX**

KARNATAKA LEGISLATIVE ASSEMBLY

SIXTEENTH LEGISLATIVE ASSEMBLY

NINTH SESSION

(Adjourned Meetings)

# THE KARNATAKA GRAM SWARAJ AND PANCHAYAT RAJ (AMENDMENT) BILL, 2026

## (LA Bill No. 03 of 2026)

A Bill further to amend the Karnataka Gram Swaraj and Panchayat Raj Act, 1993.

WHEREAS the Constitution of India, under Article 326 guarantees the right to vote through adult suffrage, ensuring that elections are conducted in a free, fair, and transparent manner, reflecting the democratic will of the people;

WHEREAS the principle of secrecy of the ballot is a cornerstone of free and fair elections, as recognized by the Judiciary which emphasized that the secrecy of the ballot protects voters from coercion, intimidation, and undue influence, thereby safeguarding the sanctity of the democratic process in several judgments of Supreme Court;

WHEREAS the Supreme Court in Kuldip Nayar v. Union of India (2006) clarified that while open ballots may be permissible in specific contexts, the secret ballot remains essential for elections to ensure voter autonomy and prevent external pressures, thereby upholding the constitutional mandate of free elections;

WHEREAS the Judiciary underscored the importance of voter confidence in the electoral process, introducing the Voter Verifiable Paper Audit Trail (VVPAT) to enhance transparency while preserving the secrecy of the ballot, and highlighted the need for continuous reforms to address vulnerabilities in electronic voting systems;

WHEREAS some concerns have been raised, regarding functioning of Electronic Voting Machines (EVMs) necessitating a return to the robust secret ballot paper system to restore public trust;

WHEREAS the decision of the Karnataka State Government to revert to paper ballots for local body elections, in response to concerns about EVM credibility and

voter privacy, reflects a growing consensus on the need to strengthen electoral mechanisms that prioritize anonymity and transparency;

WHEREAS the secret ballot system, through the use of paper ballots or other anonymized mechanisms, ensures that voters can exercise their franchise without fear of retribution, promotes electoral integrity, and aligns with India's international commitments under Article 21 of the Universal Declaration of Human Rights, which guarantees the right to free elections with a secret vote;

WHEREAS it is expedient to enact legislation to mandate the use of a secret ballot system in all local body elections, with provisions for transparent auditing and safeguards against tampering, to uphold the democratic principles enshrined in the Constitution and reinforced by judicial pronouncements;

WHEREAS the State of Karnataka, in pursuance of ensuring free, fair, and transparent elections to local authorities, has resolved to amend the relevant statutes governing local bodies to mandate the adoption of a secret ballot system using paper ballots, thereby facilitating the State Election Commission in conducting elections with enhanced voter privacy and electoral integrity;

AND WHEREAS it is expedient to amend the Karnataka Gram Swaraj and Panchayat Raj Act, 1993 (Karnataka Act 14 of 1993) to provide for the use of a secret ballot paper system in elections to rural local authorities, thereby strengthening public confidence in the democratic process;

Be it enacted by the Karnataka State Legislature in the seventy seventh year of the Republic of India as follows, namely:-

**1. Short title and commencement.- (1)** This Act may be called the Karnataka Gram Swaraj and Panchayat Raj (Amendment) Act, 2026.

(2) It shall come into force at once.

**2. Amendment of section 2.-** In the Karnataka Gram Swaraj and Panchayat Raj Act, 1993 (Karnataka Act 14 of 1993) (hereinafter referred to as the principal Act) in section 2, after clause (2), the following shall be inserted, namely:-

"(2-A) "Ballot or Ballot Box or Ballot paper" means Ballot or Ballot Box or Ballot paper wherever used shall be construed as secret Ballot Paper wherever applicable";

**3. Amendment of section 7.-** In the Principal Act, in section 7, sub-section (3) and the Explanation shall be omitted.

**4. Amendment of section 31A.-** In the Principal Act, in section 31A, in clause (a) and clause (d) the words "or voting machines" shall be omitted.

**5. Amendment of section 130.-** In the Principal Act, in section 130, sub-section (2-A) and the Explanation shall be omitted.

**6. Substitution of section 165.-** In the Principal Act, for section 165, the following shall be substituted, namely:-

**"165. Electoral roll.-** (1) For every Constituency of Zilla Panchayat there shall be an electoral roll which shall be prepared by the Assistant Commissioner, subject to the superintendence, direction and control of the State Election Commission.

(2) The Electoral roll so prepared shall be revised, modified, updated and published in accordance with the provisions of this Act.

(3) A person whose name has been included in the electoral roll of Zilla Panchayat Constituency shall be entitled to vote in an election to that constituency:

Provided that, the electoral roll for such constituency of Zilla Panchayat shall not include any amendment, transposition, inclusion or deletion of entry made after the last date for making nomination for the election to such constituency and before completion of such election."

**7. Amendment of section 169.-** In the Principal Act, in section 169, sub-section (2-A) and the Explanation shall be omitted.

**8. Power to remove difficulties.-** (1) If any difficulty arises in giving effect to the provisions of this Act, the Government may by order, published in the official Gazette, as the occasion may require, do anything which appears to it to be necessary to remove the difficulty.

(2) Every order made under this section shall, as soon as may be after it is so made, be laid before the both House of the State Legislature.

**9. Interpretation of terms.-** In the principal Act, and rules made there under, issued orders, circulars and notice in relation to governing elections to the concerned rural local authorities conducted by the State Election Commission, any reference to "Ballot" or Ballot Box" or "Ballot Paper" shall, unless the context otherwise requires, be construed to mean "Ballot" or "Ballot Box" or "Secret Ballot Paper" to ensure the secrecy of the vote, in accordance with the principles of free and fair elections.

## STATEMENT OF OBJECTS AND REASONS

It is considered necessary to amend the Karnataka Gram Swaraj and Panchayat Raj Act, 1993 (Karnataka Act 14 of 1993) to,-

(i) ensure that elections are conducted in a free, fair, and transparent manner, reflecting the democratic will of the people under Article 326 of the Constitution of India;

(ii) ensure the secrecy of the ballot voters, and protect voters from coercion, intimidation, and undue influence, thereby safeguarding the sanctity of the democratic process;

(iii) implement the Supreme Court judgment given in Kuldip Nayar v. Union of India (2006); and

(iv) to strengthen electoral mechanisms that prioritize anonymity and transparency.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**PRINYANK KHARGE**
Minister for Rural Development and
Panchayat Raj and Information Technology
and Bio Technology

**M.K. VISHALAKSHI**
Secretary
Karnataka Legislative Assembly

**ANNEXURE**
**EXTRACT FROM THE KARNATAKA GRAM SWARAJ AND PANCHAYAT RAJ ACT, 1993 (KARNATAKA ACT 14 OF 1993).**

**XX XX XX**

**2. Definitions.-XX XX**

(2) "Backward Classes" means such class or classes of citizens as may be classified as category "A" and "B" and notified by the Government from time to time for the purposes of reservation of seats and offices of Chairperson in Zilla Panchayat, Taluk Panchayat and Grama Panchayat.

(3) "building" includes a house, out- house, shop, stable, warehouse, workshop, canopy, shed, hut, or other enclosure whether used as a human dwelling or otherwise and shall include a wall, compound wall, fencing, verandah, platform, plinth, doorstep and the like;

**XX XX XX**

**7. Method of voting and procedure for election.-** (1) Every voter shall have as many votes as there are members to be elected for the constituency. No voter shall give more than one vote to any one candidate.

(2) Subject to the provisions of this Act, elections to the Grama Panchayat shall be held by ballot on non-party basis in accordance with such rules as may be prescribed.

(3)Not withstanding anything contained in this Act or the rules made thereunder, the giving and recording of votes in the Grama Panchayat election by voting machines in such manner as may be prescribed, may be adopted in such constituency or constituencies as the State Election commission may having regard to the circumstances of each case specify.

**Explanation :** For the purpose of this section, "Voting Machine" means any machine or apparatus whether operated electronically or otherwise used for giving or recording of votes and any reference to a ballot box or ballot paper in this Act or the rules made there under shall, save as otherwise provided, be construed as including a reference to such voting machine wherever such voting machine is used at any election.

**XX XX XX**

**31A. Offence of booth capturing.-** Whoever commits an offence of booth capturing shall be punishable with imprisonment for a term which shall not be less than six months but which may extend to two years and with fine and where such offence is committed by a person in the service of the Government, he shall be

punishable with imprisonment for a term which shall not be less than one year but which may extend to three years and with fine.

**Explanation.-** For the purpose of this section, 'booth capturing' includes among other things, all or any of the following activities, namely:-

(a) seizure of a polling station or a place fixed for the poll by any person or persons, making polling authorities surrender the ballot papers or voting machines and doing of any other act which affects the orderly conduct of elections;

(b) taking possession of a polling station or a place fixed for the poll by any person or persons and allowing only his or their own supporters to exercise their right to vote and prevent others from voting;

(c) threatening any elector and preventing him from going to the polling station or a place fixed for the poll to cast his vote;

(d) seizure of a place for counting of votes by any person or persons, making counting authorities surrender the ballot papers or voting machines and the doing of anything which affects the orderly counting of votes;

(e) doing by any person in the service of Government of all or any of the aforesaid activities or aiding or conniving at, any such activity in furtherance of the prospects of the election of a candidate.

**XX** **XX** **XX**

**130. Method of voting and procedure for election.-** (1) Every elector shall have as many votes as there are members to be elected. No elector shall give more than one vote to any one candidate.

(2) Subject to the provisions of this Act, elections to the Taluk Panchayat shall be held by ballot in accordance with such rules as may be prescribed.

(2A) Notwithstanding anything contained in this Act or the rules made thereunder, the giving and recording of votes in taluk panchayath elections by voting machines in such manner as may be prescribed, may be adopted in such constituency or constituencies as the State election commission may having regard to the circumstances of each case specify. Explanation : For the purpose of this section, "Voting Machine" means any machine or apparatus whether operated electronically or otherwise used for giving or recording of votes and any reference to a ballot box or ballot paper in this Act or the rules made thereunder shall, save as otherwise provided, be construed as including a reference to such voting machine wherever such voting machine is used at any election.

(3) The provisions of sections 26, 27, 28, 29, 30, 31, 1[31A, 31B]1, 32, 33, 34, 35, 36, 37, 38, 39, and 40 shall apply in respect of elections to Taluk Panchayat as they apply to elections to Grama Panchayats.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**XX** **XX** **XX**

**165. Electoral roll.-** The electoral roll of the Zilla Panchayat 1[shall be prepared by the Assistant Commissioner subject to the superintendence, direction and control of the State Election Commission:

Provided that the electoral roll of the Karnataka Legislative Assembly for the time being in force for such part of the district as is included in any constituency of the Zilla Panchayat may be adopted for the purpose of preparation of electoral roll of the Zilla Panchayat for such constituency:

Provided further that the electoral roll for such constituency of the Zilla Panchayat shall not include any amendment, transposition, inclusion or deletion of any entry made after the last date for making nomination for the election of such constituency and before the completion of such election.

**XX** **XX** **XX**

**169. Method of voting and procedure for election.-** (1) Every elector shall have as many votes as there are members to be elected. No elector shall give more than one vote to any one candidate.

(2) Subject to the provisions of this Act, election to the Zilla Panchayat shall be held by ballot in accordance with such rules as may be prescribed.

(2A) Not withstanding anything contained in this Act or the rules made thereunder, the giving and recording of votes in zilla panchayath elections by voting machines in such manner as may be prescribed, may be adopted in such constituency or constituencies as the State Election Commission may having regard to the circumstances of each case specify

**Explanation:** For the purpose of this section "Voting machine" means any machine or apparatus whether operated electronically or otherwise used for giving or recording of votes and any reference to a ballot box or ballot paper in this Act or the rules made there under shall, save as otherwise provided, be construed as including a reference to such voting machine wherever such voting machine is used at any election.

(3) The provisions of sections 26, 27, 28, 29, 30, 31,31A, 31B, 32, 33, 34, 35, 36, 37, 38, 39, and 40 shall apply in respect of elections to Zilla Panchayat as they apply to elections to Grama Panchayats.

**XX** **XX** **XX**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH